## ಟಾಟಾ ಸಮಾಜ ವಿಜ್ಞಾನ ಸಂಸ್ಥೆ
## ವಿ.ಎನ್ ಪೂರವ್ ರಸ್ತೆ, ದೇವನಾರ್, ಮುಂಬಯಿ

# ರಾಜ್ಯಗಳಲ್ಲಿ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಶಿಕ್ಷಕರ ಶಿಕ್ಷಣಕ್ಕಾಗಿ ಇರುವ ಕೇಂದ್ರ ಪ್ರಾಯೋಜಿತ ಯೋಜನೆಯ ಮೌಲ್ಯಮಾಪನ

**ವರದಿ**

**ಅಕ್ಟೋಬರ್ 2017**

**ಪ್ರಾಯೋಜಕರು**

**ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ**

## ಶಿಕ್ಷಕರ ಶಿಕ್ಷಣಕ್ಕಾಗಿ ಇರುವ ಕೇಂದ್ರ ಪ್ರಾಯೋಜಿತ ಯೋಜನೆಯ (ಸಿ.ಎಸ್.ಎಸ್.ಟಿ.ಇ) ಮೌಲ್ಯಮಾಪನ 2017
## ಸಂಕ್ಷಿಪ್ತ ಸಾರಾಂಶ

ಶಿಕ್ಷಕರ ಶಿಕ್ಷಣಕ್ಕಾಗಿ ಇರುವ ಕೇಂದ್ರ ಪ್ರಾಯೋಜಿತ ಯೋಜನೆಯು (ಸಿ.ಎಸ್.ಎಸ್.ಟಿ.ಇ), ಶಿಕ್ಷಣದ ಕುರಿತ ರಾಷ್ಟ್ರೀಯ ನೀತಿಯ ನಂತರ, ಭಾರತ ಸರ್ಕಾರದ 7ನೇ ಯೋಜನೆಯ (1985-92) ವಿಶಿಷ್ಟ ಕೊಡುಗೆಯಾಗಿದೆ. ಈ ಯೋಜನೆಯು, ಶಿಕ್ಷಕ ಶಿಕ್ಷಣ ಸಂಸ್ಥೆಗಳನ್ನು (ಟಿ.ಇ.ಐ ಗಳನ್ನು) ಅಭಿವೃದ್ಧಿಪಡಿಸುವ ಮೂಲಕ ಶಿಕ್ಷಕರ ಶಿಕ್ಷಣವನ್ನು ಬಲಪಡಿಸುವ ಮತ್ತು ಮೇಲ್ದರ್ಜೆಗೇರಿಸುವ ಮತ್ತು ಎಲ್ಲಾ ಸೇವಾಪೂರ್ವ ಮತ್ತು ಸೇವಾನಿರತ ಹಂತಗಳಲ್ಲಿ ಶಿಕ್ಷಕರ ಶಿಕ್ಷಣದ ಗುಣಮಟ್ಟವನ್ನು ವೃದ್ಧಿಸುವ ಗುರಿಯನ್ನು ಹೊಂದಿದೆ. ಸಿ.ಎಸ್.ಎಸ್.ಟಿ.ಇ ಯ ಪ್ರಸ್ತುತ ಮೌಲ್ಯಮಾಪನ ಅಧ್ಯಯನಕ್ಕೆ ಭಾರತ ಸರ್ಕಾರದ ಮಾನವ ಸಂಪನ್ಮೂಲ ಸಚಿವಾಲಯವು ಅನುದಾನವನ್ನು ಒದಗಿಸಿದ್ದು, ಇದನ್ನು ಟಾಟಾ ಸಮಾಜ ವಿಜ್ಞಾನ ಸಂಸ್ಥೆಯು (ಟಿ.ಐ.ಎಸ್.ಎಸ್) 2017ರ ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳ ನಡುವೆ 11 ರಾಜ್ಯಗಳು ಮತ್ತು 2 ಕೇಂದ್ರಾಡಳಿತ ಪ್ರದೇಶಗಳಲ್ಲಿ ನಡೆಸಿತ್ತು. ಹನ್ನೆರಡು ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿಗಳು (ಎಸ್.ಸಿ.ಇ.ಆರ್.ಟಿ ಗಳು), 13 ಶಿಕ್ಷಣದಲ್ಲಿ ಉನ್ನತ ಅಧ್ಯಯನ ಸಂಸ್ಥೆಗಳು  (ಐ.ಎ.ಎಸ್.ಇ ಗಳು), 19 ಶಿಕ್ಷಕರ ಶಿಕ್ಷಣ ಕಾಲೇಜುಗಳು (ಸಿ.ಟಿ.ಇ ಗಳು), 50 ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳು (ಡಿ.ಐ.ಇ.ಟಿ ಗಳು) ಮತ್ತು 2 ಶಿಕ್ಷಕರ ಶಿಕ್ಷಣ ಬ್ಲಾಕ್ ಸಂಸ್ಥೆಗಳಿಗೆ (ಬಿ.ಐ.ಟಿ.ಇ ಗಳು) ಕ್ಷೇತ್ರ ಭೇಟಿಗಳನ್ನು ನೀಡಲಾಯಿತು. ಎಂಟು ಮಂದಿ ಶಿಕ್ಷಣ ಕಾರ್ಯದರ್ಶಿಗಳು, ಇಬ್ಬರು ರಾಜ್ಯ ಯೋಜನಾ ನಿರ್ದೇಶಕರು, 71 ಟಿ.ಇ.ಐ ಗಳ ಮುಖ್ಯಸ್ಥರು, 91 ಮಂದಿ ಬೋಧಕ ಸಿಬ್ಬಂದಿ ಮತ್ತು 82 ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಲಾಯಿತು.[1] ಎರಡು ಸಾವಿರದ ಹದಿಮೂರು ಮತ್ತು 2017ರ ನಡುವೆ ನಡೆಸಿದ ಜಂಟಿ ಪರಿಶೀಲನಾ ಮಿಶನ್ ಗಳ ವರದಿಗಳ ಅಧ್ಯಯನ ನಡೆಸಲಾಯಿತು.

ಶಿಕ್ಷಣ ಹಕ್ಕಿನ (ಆರ್.ಟಿ.ಇ) ಅಡಿಯಲ್ಲಿ ಎಸ್.ಸಿ.ಇ.ಆರ್.ಟಿ ಗಳನ್ನು ರಾಜ್ಯದ ಶೈಕ್ಷಣಿಕ ವಿಧಾಯಕ ಶಕ್ತಿ ಎಂದು ಘೋಷಿಸಲಾಗಿದೆ. ಅವು ರಾಜ್ಯದ ಶೈಕ್ಷಣಿಕ ನೀತಿಯ ಮೇಲೆ ಹೆಚ್ಚಿನ ಪ್ರಭಾವ ಬೀರದೆ ಇರುವುದು ಕಂಡುಬಂದಿದೆ. ಎನ್.ಸಿ.ಎಫ್ 2005ರ ಕಾರಣ ಎಲ್ಲಾ ಎಸ್.ಸಿ.ಇ.ಆರ್.ಟಿ ಗಳು ಶಾಲಾ ಪಠ್ಯಕ್ರಮ ಮತ್ತು ಪಠ್ಯಪುಸ್ತಕಗಳ

ಪರಿಷ್ಕರಣೆಯ ಮೇಲ್ವಿಚಾರಣೆಯನ್ನು ನಡೆಸಿದ್ದವು. ಎನ್.ಸಿ.ಎಫ್.ಟಿ.ಇ 2009ರ ಕಾರಣ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಶಿಕ್ಷಕರ ಶಿಕ್ಷಣದಲ್ಲಿ ನೀಡಲಾಗುವ ಡಿಪ್ಲೊಮಾದ (ಪ್ರಾಥಮಿಕ ಟಿ.ಇ) ಪಠ್ಯಕ್ರಮವನ್ನು ಪರಿಷ್ಕರಿಸಿದ್ದರೆ, ಕೇವಲ ನಾಲ್ಕು ಕಡೆ ಬಿ.ಎಡ್ ಪರಿಷ್ಕರಣೆಯನ್ನು ನಡೆಸಲಾಗಿದೆ. ಪ್ರಶಿಕ್ಷಕ್ ಅನ್ನು ಎಲ್ಲಾ ಸಂಸ್ಥೆಗಳು ಮತ್ತು ರಾಜ್ಯಗಳಲ್ಲಿ ಏಕರೂಪವಾಗಿ ಪರಿಷ್ಕರಿಸದಿರುವುದು ಕಂಡುಬಂತು.

ಮೂಲಸೌಕರ್ಯ: ಒಟ್ಟಾರೆಯಾಗಿ ಎಲ್ಲಾ ಟಿ.ಇ.ಐ ಗಳು ಕೆಲಸದ ಕಚೇರಿ ಸ್ಥಳ, ಪ್ರಾಂಶುಪಾಲರ ಕೊಠಡಿ, ಸಿಬ್ಬಂದಿ ಕೊಠಡಿಗಳು ಮತ್ತು ತರಗತಿ ಕೋಣೆಗಳು ಮುಂತಾದ ಅಗತ್ಯ ಮೂಲಸೌಕರ್ಯಗಳನ್ನು ಸಾಕಷ್ಟು ಪ್ರಮಾಣದಲ್ಲಿ ಹೊಂದಿದ್ದು, ಎಂ.ಎಚ್.ಆರ್.ಡಿ ಮಾರ್ಗಸೂಚಿಗಳನ್ನು ಈಡೇರಿಸಿದ್ದವು. ಟಿ.ಇ.ಐ ಗಳಲ್ಲಿ ಗ್ರಂಥಾಲಯಗಳು ಕಂಡುಬಂದವು (ಸಿ.ಟಿ.ಇ ಗಳನ್ನು ಹೊರತುಪಡಿಸಿ). ಆದರೆ ಅವು ಕಾಲಕ್ಕೆ ತಕ್ಕಂತೆ ಇರಲಿಲ್ಲ. ಅಲ್ಲದೆ ನೀತಿ ದಾಖಲೆಗಳು ಮತ್ತು ಎಲೆಕ್ಟ್ರಾನಿಕ್ ನಿಯತಕಾಲಿಕಗಳು ಅಗತ್ಯ ಪ್ರಮಾಣದಲ್ಲಿ ಇರಲಿಲ್ಲ. ಹೆಚ್ಚಿನ ಎಸ್.ಸಿ.ಇ.ಆರ್.ಟಿ ಗಳು ವೆಬ್ ಸೈಟುಗಳನ್ನು ಹೊಂದಿದ್ದು, ಸಂಸ್ಥೆಯ ಕುರಿತು ವಿಭಿನ್ನ ಪ್ರಮಾಣದ ವಿವರಗಳು ಮತ್ತು ಮಾಹಿತಿಯನ್ನು ಒದಗಿಸುತ್ತವೆ. ಛತ್ತೀಸ್ ಗಢ, ದೆಹಲಿ, ಕರ್ನಾಟಕ ಮತ್ತು ತೆಲಂಗಾಣ ರಾಜ್ಯಗಳು ಸರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದು, ಕಾಲಕ್ಕೆ ತಕ್ಕಂತೆ ಪರಿಷ್ಕರಣೆಗೊಂಡ ಮತ್ತು ಮಾಹಿತಿಯುಕ್ತ ವೆಬ್ ಸೈಟ್ ಗಳನ್ನು ಹೊಂದಿದ್ದವು. ಕೆಲವು ಡಯಟ್ ಗಳು ಪರಿಣಾಮಕಾರಿಯಾಗಿ ಕೆಲಸ ಮಾಡುವ ಸಂಪನ್ಮೂಲ ಕೇಂದ್ರಗಳನ್ನು ಹೊಂದಿದ್ದವು. 75%ದಷ್ಟು ಟಿ.ಇ.ಐ ಗಳು ಕಂಪ್ಯೂಟರ್ ಕೊಠಡಿಗಳನ್ನು ಹೊಂದಿದ್ದು, 74%ಗಳು ಕಾರ್ಯ ನಿರ್ವಹಿಸುತ್ತಿದ್ದರೆ, 70% ಗಳು ಭೇಟಿಯ ದಿನದಂದು ಸಕ್ರಿಯ ಇಂಟರ್ನೆಟ್ ಸಂಪರ್ಕವನ್ನು ಹೊಂದಿದ್ದವು. ಬೋಧಕ ಸಿಬ್ಬಂದಿಗೆ ಪ್ರತ್ಯೇಕ ಕಂಪ್ಯೂಟರ್ ಗಳನ್ನು ಒದಗಿಸಲಾಗಿರಲಿಲ್ಲ. ಇವರಲ್ಲಿ ಕೆಲವರು ಕಂಪ್ಯೂಟರ್ ಕೊಠಡಿಗಳನ್ನೇ ಬಳಸುತ್ತಿದ್ದರು.

ಸಿಬ್ಬಂದಿ: ಒಟ್ಟಾರೆಯಾಗಿ ಶೈಕ್ಷಣಿಕ ಸಿಬ್ಬಂದಿಯ ಕೊರತೆ ಹಾಗೂ ಸಂಬಂಧಿತ ಶೈಕ್ಷಣಿಕ ಮತ್ತು ವೃತ್ತಿಪರ ಅರ್ಹತೆಗಳನ್ನು ಹೊಂದಿದ್ದ ಸಿಬ್ಬಂದಿಗಳ ಕೊರತೆಯು ಎಲ್ಲಾ ಸಂಸ್ಥೆಗಳನ್ನು ಕಾಡುತ್ತಿರುವ ಸಾಮಾನ್ಯ ಸಮಸ್ಯೆಯಾಗಿತ್ತು. ಅನೇಕ ರಾಜ್ಯಗಳಲ್ಲಿ, ಶೈಕ್ಷಣಿಕ ಆಡಳಿತಾಧಿಕಾರಿಗಳನ್ನು ಈ ಸಂಸ್ಥೆಗಳಿಗೆ ನಿಯೋಜಿಸಲಾಗಿತ್ತು. ಅಲ್ಲದೆ ದೆಹಲಿ ಹೊರತುಪಡಿಸಿ ಭೇಟಿ ನೀಡಿದ ಯಾವುದೇ ರಾಜ್ಯಗಳಲ್ಲಿ ಶೈಕ್ಷಣಿಕ ಕೇಡರ್ ಇರಲಿಲ್ಲ (ತಮಿಳುನಾಡು, ಕೇರಳ ಮತ್ತು ಗುಜರಾತಿನಲ್ಲಿ ಜೆ.ಆರ್.ಎಂ ಗಳು ಶೈಕ್ಷಣಿಕ ಕೇಡರ್ ಗಳನ್ನು ವರದಿ ಮಾಡಿವೆ). ಎಸ್.ಸಿ.ಇ.ಆರ್.ಟಿ ಗಳಲ್ಲಿ ಸರಾಸರಿ 58%ದಷ್ಟು ಶೈಕ್ಷಣಿಕ ಹುದ್ದೆಗಳು ಮತ್ತು 63%ದಷ್ಟು ಶೈಕ್ಷಣಿಕೇತರ ಹುದ್ದೆಗಳನ್ನು ಭರ್ತಿ ಮಾಡಲಾಗಿತ್ತು (ಶೈಕ್ಷಣಿಕ ಹುದ್ದೆಗಳು: ಛತ್ತೀಸ್ ಗಢ, ಹಿಮಾಚಲ ಪ್ರದೇಶ, ಕರ್ನಾಟಕ, ಉತ್ತರ ಪ್ರದೇಶ (92-97%, ಮತ್ತು ಅಸ್ಸಾಂ 16%, ಬಿಹಾರ 27%; ಶೈಕ್ಷಣಿಕೇತರ: ಬಿಹಾರ 100%, ತೆಲಂಗಾಣ 37%) ಐ.ಎ.ಎಸ್.ಇ ಗಳಲ್ಲಿ ಸರಾಸರಿ 64%ದಷ್ಟು ಶೈಕ್ಷಣಿಕ ಮತ್ತು 72%ದಷ್ಟು ಶೈಕ್ಷಣಿಕೇತರ ಹುದ್ದೆಗಳನ್ನು ಭರ್ತಿ ಮಾಡಲಾಗಿತ್ತು (ಶೈಕ್ಷಣಿಕ - ಕರ್ನಾಟಕ 100%, ಯು.ಪಿ 32%; ಶೈಕ್ಷಣಿಕೇತರ: ಕರ್ನಾಟಕ 100%, ಮಹಾರಾಷ್ಟ್ರ 0%) ಸಿ.ಟಿ.ಇ ಗಳಲ್ಲಿ 32% ಗಳಲ್ಲಿ 50% ಅಥವಾ ಕಡಿಮೆ ಪ್ರಮಾಣದಲ್ಲಿ ಶೈಕ್ಷಣಿಕ ಸಿಬ್ಬಂದಿಗಳಿದ್ದರು (ಬಿಹಾರದಲ್ಲಿ 1ಸಿ.ಟಿ.ಇ 100%, ಮತ್ತು ಅಸ್ಸಾಂ ಮತ್ತು ಕರ್ನಾಟಕದಲ್ಲಿ <25%, ತಲಾ 1 ಸಿ.ಟಿ.ಇ).

[1] ಉಲ್ಲೇಖಿಸಲಾದ ಎಲ್ಲಾ ದತ್ತಾಂಶ, ಶೇಕಡಾ ಮತ್ತು ಅಂಕಿಅಂಶಗಳು, ಕ್ಷೇತ್ರ ಸಮೀಕ್ಷೆಯಲ್ಲಿ ಒಳಗೊಳ್ಳಲಾದ 11 ರಾಜ್ಯಗಳು ಮತ್ತು 2 ಕೇಂದ್ರಾಡಳಿತ ಪ್ರದೇಶಗಳ ಆಯ್ದ ಮಾದರಿ ಶಿಕ್ಷಕರ ಶಿಕ್ಷಣ ಸಂಸ್ಥೆಗಳಿಂದ ಕಲೆ ಹಾಕಿದ

ದತ್ತಾಂಶವನ್ನು ಆಧರಿಸಿವೆ.

47% ಗಳಲ್ಲಿ 50% ಅಥವಾ ಅದಕ್ಕಿಂತ ಕಡಿಮೆ ಶೈಕ್ಷಣಿಕೇತರ ಸಿಬ್ಬಂದಿಗಳಿದ್ದರು (ಕರ್ನಾಟಕದಲ್ಲಿ <25% 1 ಸಿ.ಟಿ.ಇ). 64%ದಷ್ಟು ಡಯಟ್ ಗಳಲ್ಲಿ 50% ಅಥವಾ ಅದಕ್ಕಿಂತ ಕಡಿಮೆ ಶೈಕ್ಷಣಿಕ ಸಿಬ್ಬಂದಿ ಇದ್ದರು. (ಹಿಮಾಚಲ ಪ್ರದೇಶದಲ್ಲಿ ಒಂದು ಡಯಟ್ ನಲ್ಲಿ ಮತ್ತು ಮಧ್ಯಪ್ರದೇಶದಲ್ಲಿ ಎರಡರಲ್ಲಿ 100% ದಷ್ಟು ಭರ್ತಿಯಾಗಿದೆ; ತೆಲಂಗಾಣದಲ್ಲಿ 4 ಡಯಟ್ ಗಳಲ್ಲಿ ಮತ್ತು ಅಸ್ಸಾಂನಲ್ಲಿ 1 ಡಯಟ್ ನಲ್ಲಿ <25%). 42%ದಷ್ಟು ಡಯಟ್ ಗಳಲ್ಲಿ 50% ಅಥವಾ ಅದಕ್ಕಿಂತ ಕಡಿಮೆ ಶೈಕ್ಷಣಿಕೇತರ ಸಿಬ್ಬಂದಿಗಳಿರುವುದು ಕಂಡು ಬಂದಿದೆ (ಅಸ್ಸಾಂ ರಾಜ್ಯದ 4, ಬಿಹಾರದ 1 ಮತ್ತು ಮಿಜೋರಾಂನ 1 ಡಯಟ್ ನಲ್ಲಿ 110%, ಮತ್ತು ಛತ್ತೀಸ್ ಗಢದ 1 ಡಯಟ್ ನಲ್ಲಿ 25%ದಷ್ಟು ಕಂಡು ಬಂದಿದ್ದಾರೆ).

ಸಾಮರ್ಥ್ಯ ವೃದ್ಧಿ: ಸಾಮಾನ್ಯವಾಗಿ, ಸಿಬ್ಬಂದಿ ಸಾಮರ್ಥ್ಯ ವೃದ್ಧಿ ಅವಕಾಶ ಮತ್ತು ಒಡ್ಡುವಿಕೆಗಳು ಸೀಮಿತವಾಗಿದ್ದವು ಮಾತ್ರವಲ್ಲದೆ ರಚನಾತ್ಮಕವಾಗಿರಲಿಲ್ಲ. ಯು.ಎಸ್.ಎ.ಐ.ಡಿ ಬೆಂಬಲಿತ ಫೆಲೋಶಿಪ್ ಕಾರ್ಯಕ್ರಮವು ಸಮೃದ್ಧತೆಯಿಂದ ಕೂಡಿದ್ದರೂ ಸಹ, ತಾವು ವಾಪಾಸಾದ ನಂತರ ಈ ಕಲಿಕೆಯನ್ನು ಬಳಸಲು ಸೀಮಿತ ಮಟ್ಟದ ಅವಕಾಶಗಳಷ್ಟೇ ಲಭಿಸಿದವು ಎಂದು ಸಿಬ್ಬಂದಿಗಳು ವರದಿ ಮಾಡಿದ್ದಾರೆ. ಟಿ.ಎಸ್.ಜಿ ಒದಗಿಸಿದ ಸಾಮರ್ಥ್ಯ ವೃದ್ಧಿ ಅವಕಾಶವು ಉಪಯುಕ್ತವಾಗಿತ್ತು ಎಂಬುದು ಕಂಡು ಬಂದಿದೆ. ಎನ್.ಸಿ.ಇ.ಆರ್.ಟಿ ಮತ್ತು ಎನ್.ಯು.ಇ.ಪಿ.ಎ ವತಿಯಿಂದ ಈ ಸಂಸ್ಥೆಗಳನ್ನು ಗುರಿಯಾಗಿಸಿಕೊಂಡು ಕೈಗೊಳ್ಳುವ ಕಾರ್ಯಕ್ರಮಗಳ ಕೊರತೆ ಇದ್ದುದು ಸಹ ತಿಳಿದು ಬಂದಿದೆ. ಐ.ಸಿ.ಟಿ ಬಳಕೆಯಲ್ಲಿ ತಮ್ಮ ಸಿಬ್ಬಂದಿಗಳು ತರಬೇತಿಯನ್ನು ಪಡೆದಿದ್ದಾರೆ ಎಂದು 74%ದಷ್ಟು ಸಂಸ್ಥೆಗಳು ವರದಿ ಮಾಡಿವೆ.

ಸಂಶೋಧನೆ ಮತ್ತು ಅಭಿವೃದ್ಧಿ: ಟಿ.ಇ.ಐ ಗಳಲ್ಲಿ ಹೆಚ್ಚಿನ ಸಿಬ್ಬಂದಿಗಳು ಸಣ್ಣ ಮಟ್ಟದ ಸಂಶೋಧನಾ ಅಧ್ಯಯನದಲ್ಲಿ ತೊಡಗಿಸಿಕೊಂಡಿದ್ದರು. ಇವುಗಳ ಗುಣಮಟ್ಟ ಮತ್ತು ಕಠಿಣತೆಯ ಪರಿಶೀಲನೆ ನಡೆಸಲಾಗುತ್ತಿಲ್ಲ ಹಾಗೂ ಫಲಿತಾಂಶಗಳನ್ನು ಬೇರೆಯವರೊಂದಿಗೆ ಹಂಚಿಕೊಳ್ಳಲಾಗುತ್ತಿಲ್ಲ ಅಥವಾ ಬಳಸಲಾಗುತ್ತಿಲ್ಲ. ಕೆಲ ಪ್ರಕರಣಗಳಲ್ಲಿ ಪಠ್ಯಕ್ರಮದ ಅಭಿವೃದ್ಧಿ ಮತ್ತು ಸ್ಥಳೀಯ ಸನ್ನಿವೇಶಗಳಿಗೆ ಅವುಗಳು ಹೊಂದಿಕೊಳ್ಳುವಂತೆ ಮಾಡುವ ಕೆಲಸವನ್ನು ಡಯಟ್ ಸಿಬ್ಬಂದಿಗಳು ಮಾಡುತ್ತಿದ್ದರು. ಈ ಪ್ರಯತ್ನಗಳು ಪ್ರತ್ಯೇಕ ನೆಲೆಯಲ್ಲಿ ನಡೆಯುತ್ತಿದ್ದವು. ಅಗತ್ಯ ಗಮನವೂ ಇದಕ್ಕೆ ದೊರೆತಿಲ್ಲ ಮಾತ್ರವಲ್ಲದೆ ಗುಣಮಟ್ಟವನ್ನು ವೃದ್ಧಿಸುವ ಕೆಲಸವೂ ನಡೆದಿಲ್ಲ.

ಸಹಯೋಗ ಮತ್ತು ಜಾಲ ನಿರ್ಮಾಣ: ಎಲ್ಲಾ ಎಸ್.ಸಿ.ಇ.ಆರ್.ಟಿ ಗಳು ಎಸ್.ಎಸ್.ಎ ಮತ್ತು ಆರ್.ಎಂ.ಎಸ್.ಎ ಗಳೊಂದಿಗೆ (ಮುಖ್ಯವಾಗಿ ತರಬೇತಿಯ ವಿಚಾರದಲ್ಲಿ) ಬಲವಾದ ಸಂಪರ್ಕವನ್ನು ಹೊಂದಿರುವುದು ಕಂಡು ಬಂದಿದೆ. ಮುಖ್ಯವಾಗಿ ಸೇವಾನಿರತ ತರಬೇತಿ ಮತ್ತು ವಿವಿಧ ಅಧ್ಯಯನಗಳಿಗೆ ಸಂಬಂಧಿಸಿದಂತೆ ಎಸ್.ಸಿ.ಇ.ಆರ್.ಟಿ ಗಳು ಡಯಟ್ ಗಳೊಂದಿಗೆ ಸಾಮಾನ್ಯವಾಗಿ ಉತ್ತಮ ಸಂಬಂಧವನ್ನು ಹೊಂದಿದ್ದವು. ಆದರೆ ಸಿ.ಟಿ.ಇ ಮತ್ತು ಐ.ಎ.ಎಸ್.ಇ ಗಳು ಸಾಮಾನ್ಯವಾಗಿ ರಾಜ್ಯ ತರಬೇತಿ ವ್ಯವಸ್ಥೆಯೊಂದಿಗೆ ಹೆಚ್ಚಿನ ಸಂಪರ್ಕವನ್ನು ಹೊಂದಿರಲಿಲ್ಲ. ಅಲ್ಲದೆ ಎಸ್.ಸಿ.ಇ.ಆರ್.ಟಿ ಗಳು, ಆರ್.ಎಂ.ಎಸ್.ಎ ಮತ್ತು ಎಸ್.ಎಸ್.ಎ ಯೊಂದಿಗೆ ಸಂಪರ್ಕವನ್ನು ಹೊಂದಿರಲಿಲ್ಲ. ಭಾರತದಾದ್ಯಂತ ಜಾಲವನ್ನು ಹೊಂದಿರುವ ಸರ್ಕಾರೇತರ ಸಂಸ್ಥೆಗಳೊಂದಿಗಿನ ಸಹಯೋಗದ ವಿಚಾರದ ಬಂದಾದ ಈ ಪಟ್ಟಿಯಲ್ಲಿ ಟಿ.ಇ.ಎಸ್.ಎಸ್-ಇಂಡಿಯಾ, ಏಕಲವ್ಯ ಮತ್ತು ಅಜೀಂ ಪ್ರೇಮ್

ಜಿ ಫೌಂಡೇಶನ್ ಒಳಗೊಂಡಿದ್ದವು. ಸಂಸ್ಥೆಗೆ ಸಂಬಂಧಿಸಿದ ಸಾಂಸ್ಥಿಕ ಸಹಯೋಗದಲ್ಲಿ ಹ್ಯೂಮನ್ ಪೀಪಲ್ ಟು ಪೀಪಲ್ ಮತ್ತು ಆರ್.ವಿ.ಇ.ಸಿ ಗಳನ್ನು ಕಾಣಬಹುದು. ಈ ಸಹಯೋಗಗಳ ಸಂಪೂರ್ಣ ಕೊಡುಗೆ ಅಥವಾ ಯೋಜಿಸಲಾದ ಅಥವಾ ಖಚಿತಪಡಿಸಲಾದ ಸುಸ್ಥಿರತೆಯ ಜಾಡನ್ನು ವ್ಯವಸ್ಥಿತವಾಗಿ ದಾಖಲಿಸಲಾಗಿಲ್ಲ ಅಥವಾ ನಿಗಾ ವಹಿಸಲಾಗಿಲ್ಲ.

ಅನುದಾನ ಮತ್ತು ಆಡಳಿತ: ಕಳೆದ ಕೆಲವು ವರ್ಷಗಳಲ್ಲಿ ಬಜೆಟ್ ಅಂಗೀಕಾರ ಮತ್ತು ಬಿಡುಗಡೆಯಲ್ಲಿ ಸಕಾಲಿಕತೆಯನ್ನು ಕಾಪಾಡುವಲ್ಲಿ ಸುಧಾರಣೆ ಉಂಟಾಗಿರುವುದನ್ನು ಗಮನಿಸಲಾಗಿದೆ. ಆದರೆ ಸ್ಥಳೀಯ ಮಟ್ಟದಲ್ಲಿ ಅನುದಾನದ ಹಂಚಿಕೆಯು ಅಷ್ಟೊಂದು ತೃಪ್ತಿಕರವಾಗಿಲ್ಲ. ಹೀಗಾಗಿ ತರಬೇತಿಗೆ ಹೆಚ್ಚಿನ ಅವಕಾಶ ದೊರೆಯುತ್ತಿಲ್ಲ. ಹಣದುಬ್ಬರವನ್ನು ನಿಭಾಯಿಸುವುದಕ್ಕಾಗಿ ಹಣಕಾಸಿನ ಮಾನದಂಡಗಳನ್ನು ಪರಿಷ್ಕರಿಸದೆ ಇದ್ದ ಕಾರಣ ಚಟುವಟಿಕೆಗಳನ್ನು ನಿಭಾಯಿಸುವ ವಿಚಾರದಲ್ಲಿ ಅಡಚಣೆಗಳು ಉಂಟಾದವು. ಅಲ್ಲದೆ, ಕೇಂದ್ರೀಯ ಮಟ್ಟದಲ್ಲಿ ಸಿದ್ಧಪಡಿಸಿದ ಮಾನದಂಡಗಳು ನಿರ್ದಿಷ್ಟ ರಾಜ್ಯದ ಅಗತ್ಯತೆಗಳನ್ನು ಈಡೇರಿಸದೆ ಇರುವುದು ಕಂಡುಬಂತು. ಮಾನದಂಡಗಳು ಮತ್ತು ವರದಿಗಾರಿಕೆಯಲ್ಲಿ ಸ್ಪಷ್ಟತೆಯ ಕೊರತೆ ಇರುವ ಕಾರಣ ಅಗತ್ಯವಿರುವ ಲೆಕ್ಕಪತ್ರಗಳ ದಾಖಲೀಕರಣವನ್ನು ಸಕಾಲದಲ್ಲಿ ಪೂರ್ಣಗೊಳಿಸಲು ಸಾಧ್ಯವಾಗದೆ ವಿಳಂಬವಾಗುತ್ತಿದೆ ಎಂದು ಟಿ.ಇ.ಐ ಗಳು ವರದಿ ಮಾಡಿವೆ.

ಈ ಯೋಜನೆಯು ಕಲ್ಪಿಸಿಕೊಂಡಿರುವ ವಿಕೇಂದ್ರೀಕರಣವು ಯಾವುದೇ ಹಂತದಲ್ಲಿ ಕಾರ್ಯನಿರ್ವಹಿಸುವುದು ಕಂಡುಬಂದಿಲ್ಲ. ಹೀಗೆ ಈ ಯೋಜನೆಯು ಕೇಂದ್ರೀಕರಣಗೊಂಡಿತ್ತು. ವಾರ್ಷಿಕ ಕಾರ್ಯಯೋಜನೆಯನ್ನು ಸಂಸ್ಥೆಯೊಳಗಿನ ಸಣ್ಣ ತಂಡವು ಸಿದ್ಧಪಡಿಸುತ್ತಿದ್ದು, ಸಂಸ್ಥೆಯೊಳಗೆ ನಿರಂತರವಾಗಿ ಪರಿಶೀಲನೆಗೆ ಒಳಪಟ್ಟಿಲ್ಲ. ಸಂಸ್ಥೆಯೊಳಗಿನ ಸಭೆಗಳು ನಿರಂತರವಾಗಿ ನಡೆಯುತ್ತಿಲ್ಲ. ಏನಾದರೂ ನಿರ್ದಿಷ್ಟ ಕಾರ್ಯಕ್ರಮಗಳಿಗೆ ಯೋಜನೆ ರೂಪಿಸಬೇಕಾಗಿದ್ದರೆ ಮಾತ್ರವೇ ಈ ಸಭೆಗಳು ನಡೆಯುತ್ತಿದ್ದವು. ಸಣ್ಣ ತಂಡಗಳು ನಿರಂತರವಾಗಿ ಅನೌಪಚಾರಿಕವಾಗಿ ಸಂವಾದ ನಡೆಸುತ್ತಿದ್ದವು. ಹೆಚ್ಚಿನ ಎಸ್.ಸಿ.ಇ.ಆರ್.ಟಿ ಗಳು ಕಾರ್ಯಕ್ರಮ ಸಲಹಾ ಸಮಿತಿಗಳನ್ನು ಹೊಂದಿದ್ದವು. ಆದರೆ ಇವುಗಳಲ್ಲಿ ಎರಡರಲ್ಲಿ ಮಾತ್ರವೇ ನಿರಂತರ ಸಭೆಗಳು ನಡೆಯುತ್ತಿದ್ದವು.

ಶಿಕ್ಷಕರ ವೃತ್ತಿಪರ ಬೆಳವಣಿಗೆ: ಸೇವಾನಿರತ ಶಿಕ್ಷಕರ ವೃತ್ತಿಪರ ಬೆಳವಣಿಗೆಯು ಹೆಚ್ಚಿನ ಮಟ್ಟಿಗೆ ಕೇಂದ್ರೀಕೃತವಾಗಿದ್ದು ಮಾನದಂಡ ಆಧರಿತವಾಗಿತ್ತು. ಅಲ್ಲದೆ ಬಜೆಟ್ ಅಗತ್ಯತೆಗಳನ್ನು ಈಡೇರಿಸುವುದಕ್ಕಾಗಿ ಕೈಗೊಂಡಂತೆ ಕಾಣುತ್ತಿತ್ತು. ಕೆಲವು ರಾಜ್ಯಗಳು, ಅಗತ್ಯತೆಗಳ ಮೌಲ್ಯಮಾಪನವನ್ನು ಆಧರಿಸಿ ಯೋಜನೆ ರೂಪಿಸುವುದನ್ನು ವರದಿ ಮಾಡಿವೆ. ವೇಳಾಪಟ್ಟಿ ತಯಾರಿಯು ಕೇಂದ್ರೀಯವಾಗಿ ಚಾಲಿತವಾಗಿತ್ತು. ಬಿ.ಆರ್.ಸಿ ಗಳು ಮತ್ತು ಸಿ.ಆರ್.ಸಿ ಗಳ ನಡುವಿನ ಕೊಂಡಿಯು ದುರ್ಬಲವಾಗಿತ್ತು ಮಾತ್ರವಲ್ಲದೆ ತರಬೇತಿಯ ನಂತರ ಶಾಲೆ ಆಧರಿತ ಅನುಸರಣೆಯು ನಿರಂತರವಾಗಿ ನಡೆದಿಲ್ಲ ಹಾಗೂ ಪರಿಣಾಮಕಾರಿಯಾಗಿ ಇದರ ದಾಖಲೀಕರಣವೂ ನಡೆದಿಲ್ಲ. ತರಬೇತಿಯ ಗುಣಮಟ್ಟದ ಕುರಿತ ಪ್ರತಿಕ್ರಿಯೆಯನ್ನು ನಿರ್ವಹಿಸಿಲ್ಲ. ತರಬೇತಿ ನಿರ್ವಹಣೆ ವ್ಯವಸ್ಥೆಯನ್ನು ಮಿಜೋರಾಂನಲ್ಲಿ ಮಾತ್ರವೇ ಬಳಸಲಾಗುತ್ತಿದೆ.

ಡಯಟ್ ಗಳಲ್ಲಿ ನಡೆಯುವ ಸೇವಾಪೂರ್ವ ತರಬೇತಿಯ ಗುಣಮಟ್ಟದ ಬಗ್ಗೆ ವಿದ್ಯಾರ್ಥಿಗಳು ಸಕಾರಾತ್ಮಕ ಪ್ರತಿಕ್ರಿಯೆಯನ್ನು ನೀಡಿದ್ದಾರೆ. ಆದರೆ ಸಿಬ್ಬಂದಿಗಳ ಕೊರತೆಯು ಕಾರ್ಯನಿರ್ವಹಣೆಯ ಗುಣಮಟ್ಟದ ಮೇಲೆ ಪ್ರತಿಕೂಲ ಪರಿಣಾಮವನ್ನು ಬೀರಿದೆ.

ವಿದ್ಯಾರ್ಥಿಗಳು, ಬೋಧಕ ಸಿಬ್ಬಂದಿ ಮತ್ತು ಸಂಸ್ಥೆಗಳ ಮುಖ್ಯಸ್ಥರು ಖಾಸಗಿ ಸಂಸ್ಥೆಗಳಿಗೆ ವಿಶೇಷ ಮನ್ನಣೆಯನ್ನು

ನೀಡುತ್ತಿಲ್ಲ. ತರಗತಿಗಳು ನಡೆಯದಿರುವುದು, ಅಧಿಕ ಶುಲ್ಕ, ಹಾಗೂ ಕಳಪೆ ಗುಣಮಟ್ಟ ಮುಂತಾದ ಕಾರಣಗಳನ್ನು ಅವರು ಮುಂದಿಟ್ಟಿದ್ದಾರೆ. ಖಾಸಗಿ ಸಂಸ್ಥೆಗಳು ನಾಯಿಕೊಡೆಗಳಂತೆ ಬೆಳೆದಿರುವುದರಿಂದ ಸಿ.ಎಸ್.ಎಸ್.ಟಿ.ಇ ಟಿ.ಇ.ಐ ಗಳ ಗುಣಮಟ್ಟದ ಮೇಲೆ ನಿಗಾ ಇರಿಸುವ ಕೆಲಸವು ಪರಿಣಾಮಕಾರಿಯಾಗಿ ನಡೆದಿಲ್ಲ.

ತಂತ್ರಜ್ಞಾನದ ಬಳಕೆ: ಆಡಳಿತಾತ್ಮಕ ವಿಚಾರಗಳಿಗಾಗಿ ಐ.ಸಿ.ಟಿ ಯನ್ನು ಬಳಸಲಾಗುತ್ತಿದೆ. ಇಮೇಲ್ ಬಳಕೆ, ಉಪಗ್ರಹ ಸಂವಹನ, ಸಾಮಾಜಿಕ ಮಾಧ್ಯಮ ವೇದಿಕೆಗಳು, ಕ್ಯಾಂಪಸ್ ಒಳಗಿನ ಮೇಲ್ವಿಚಾರಣೆ, ಸಾಂಸ್ಥಿಕ ವೆಬ್ ಸೈಟ್ ಗಳು ಮತ್ತು ಐ.ಸಿ.ಟಿ ಕೊಠಡಿಗಳು ಶಿಕ್ಷಕ ಶಿಕ್ಷಣ ಸಂಸ್ಥೆಗಳಲ್ಲಿ ಕಂಡುಬಂದವು. ಹೆಚ್ಚಿನ ಸಿಬ್ಬಂದಿಗಳು ಐ.ಸಿ.ಟಿ ಬಳಕೆಯಲ್ಲಿ ಒಂದಷ್ಟು ತರಬೇತಿಯನ್ನು ಪಡೆದಿದ್ದರು. ತರಗತಿಯಲ್ಲಿ ಮತ್ತು ಶೈಕ್ಷಣಿಕ ಬೋಧನೆಗಾಗಿ ಐ.ಸಿ.ಟಿ ಬಳಕೆಯು ಪವರ್ ಪಾಯಿಂಟ್ ಗಳಿಗೆ ಸೀಮಿತವಾಗಿತ್ತು. ವಿದ್ಯಾರ್ಥಿಗಳು ಸಕ್ರಿಯವಾಗಿ ಸಾಮಾಜಿಕ ಮಾಧ್ಯಮವನ್ನು ಬಳಸುತ್ತಿದ್ದರು. ಕರ್ನಾಟಕ, ಬಿಹಾರ, ಛತ್ತೀಸ್ ಗಢ ರಾಜ್ಯಗಳು ತಮ್ಮ ಶೈಕ್ಷಣಿಕ ಕಾರ್ಯಕ್ರಮಗಳ ನಿರ್ವಹಣೆಗಾಗಿ ತಂತ್ರಜ್ಞಾನವನ್ನು ಬಳಸುತ್ತಿದ್ದವು. ರಾಜಸ್ಥಾನ, ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶ ಮುಂತಾದ ಕೆಲವು ರಾಜ್ಯಗಳು ತಮ್ಮ ಶಾಲೆಗಳು ಮತ್ತು ಶಿಕ್ಷಕರ ನಿರ್ವಹಣೆಗಾಗಿ ತಂತ್ರಜ್ಞಾನ ವೇದಿಕೆಗಳನ್ನು ಬಳಸುತ್ತಿದ್ದವು. ಆದರೆ ಸಿ.ಎಸ್.ಎಸ್.ಟಿ.ಇ ಯೋಜನೆಯ ಸಂಸ್ಥೆಗಳು ಇವುಗಳೊಂದಿಗೆ ಏಕೀಕರಣಗೊಂಡಿರಲಿಲ್ಲ.

ಅತ್ಯುತ್ತಮ ವಿಧಾನಗಳು: ಸೇವಾಪೂರ್ವ ಶಿಕ್ಷಕ ಶಿಕ್ಷಣದಲ್ಲಿ, ಐಜ್ವಾಲ್ ನಲ್ಲಿರುವ ಐ.ಎ.ಎಸ್.ಇ ಯು ಬಹು ವಿಧಾನಗಳ ಬಿ.ಎಡ್ ಕಾರ್ಯಕ್ರಮವನ್ನು ಅನ್ವೇಷಿಸಿ ಅಭಿವೃದ್ಧಿಪಡಿಸಿದೆ. ಎ.ಎಸ್.ಯು ಬೋಧಕ ಸಿಬ್ಬಂದಿಯ ಅಂಗವೆನಿಸಿರುವ ಡಯಟ್ ಭೋಪಾಲ್ ನ ಬೋಧಕ ಸಿಬ್ಬಂದಿಗಳು ತಮ್ಮ ವಿದ್ಯಾರ್ಥಿಗಳ ಇಂಟರ್ನ್ ಶಿಪ್ ಅನ್ನು ಅಭಿವೃದ್ಧಿಪಡಿಸಿ ಬಲಪಡಿಸಿದರೆ, ಪುದುಚೇರಿಯ ಡಯಟ್ ಸಂಸ್ಥೆಯು ವಿದ್ಯಾರ್ಥಿ ಶಿಕ್ಷಕರಿಗಾಗಿ ಅಧ್ಯಯನ ಕಲಿಕೆ ಸಾಮಗ್ರಿಗಳನ್ನು ಅಭಿವೃದ್ಧಿಪಡಿಸಿದೆ. ಹಿಮಾಚಲ ಪ್ರದೇಶದ ಎಸ್.ಸಿ.ಇ.ಆರ್.ಟಿ ಯು ಒಂದು ಸಾಫ್ಟ್ ವೇರ್ ಆಧರಿತ ವ್ಯವಸ್ಥೆಯ ಮೂಲಕ, ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಚಟುವಟಿಕೆಗಳಿಗಾಗಿ ಕ್ರಿಯಾತ್ಮಕ ಮೇಲ್ವಿಚಾರಣೆ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿ ಜಾರಿಗೆ ತಂದಿದೆ (ಎಸ್.ಸಿ.ಇ.ಆರ್.ಟಿ, ಹಿಮಾಚಲ ಪ್ರದೇಶ). ಮಧ್ಯಪ್ರದೇಶ ಮತ್ತು ಬಿಹಾರದ ಅನೇಕ ಟಿ.ಇ.ಐ ಗಳು ನಿರಂತರವಾಗಿ ಬೆಳಗ್ಗಿನ ಸಭೆಯನ್ನು ನಡೆಸುತ್ತಿವೆ. ಸರ್ಚಿಪ್ ನಲ್ಲಿರುವ ಡಯಟ್, ಕಾರ್ಯನಿರ್ವಹಿಸುತ್ತಿರುವ ತರಬೇತಿ ನಿರ್ವಹಣೆ ವ್ಯವಸ್ಥೆಯನ್ನು ನಿರ್ವಹಿಸುತ್ತಿದೆ. ಸಂಶೋಧನೆ ಮತ್ತು ನಾವಿನ್ಯತೆಯ ನಿಟ್ಟಿನಲ್ಲಿ ಬಿಲಾಸ್ಪುರದ (ಗ್ರಾಮೀಣ) ಡಯಟ್ ನ ಸಸ್ಯಶಾಸ್ತ್ರೀಯ ಉದ್ಯಾನ, ನಳಂದಾದಲ್ಲಿರುವ ಡಯಟ್ ನಲ್ಲಿ ನಾವಿನ್ಯತೆಗೆ ಬೋಧನಾ ಸಿಬ್ಬಂದಿಯ ನೆರವು, ಶಾಲಾ ಶಿಕ್ಷಕರಿಗಾಗಿ ಸಂಶೋಧನೆಗಾಗಿ ಪಠ್ಯಕ್ರಮದ ಅಭಿವೃದ್ಧಿ (ಐ.ಎ.ಎಸ್.ಇ ದೆಹಲಿ), ಮತ್ತು ಎಸ್.ಡಿ.ಎಂ.ಸಿ ಗಳ ಜೊತೆಗೂಡಿ ಕೆಲಸ ಮಾಡುವುದು (ಬೆಂಗಳೂರಿನ (ಗ್ರಾಮಾಂತರ) ಡಯಟ್) ಮತ್ತು ಸ್ಥಳೀಯ ಭಾಷೆಯ ಶಬ್ದಕೋಶದ ಅಭಿವೃದ್ಧಿ (ಉಜ್ಜಯಿನಿಯ ಡಯಟ್) ಇತ್ಯಾದಿಗಳನ್ನು ಪಟ್ಟಿ ಮಾಡಬಹುದು. ಧರ್ಮಶಾಲೆಯಲ್ಲಿರುವ ಸಿ.ಟಿ.ಇ ಯು ತಮ್ಮ ಗ್ರಂಥಾಲಯವನ್ನು ಡಿಜಿಟಲೀಕರಣಗೊಳಿಸಿದ್ದು, ಇದು ಇತರ ಸಂಸ್ಥೆಗಳಿಗೂ ದೊರೆಯುವಂತೆ ಮಾಡಿದೆ, ಚಾಮರಾಜನಗರದಲ್ಲಿರುವ ಡಯಟ್ ಚೆನ್ನಾಗಿ ಕಾರ್ಯ ನಿರ್ವಹಿಸುವ ಸಂಪನ್ಮೂಲ ಕೇಂದ್ರವನ್ನು ಹೊಂದಿದೆ, ಹಾಗೂ ಇಂದೋರ್ ನಲ್ಲಿರುವ ಡಯಟ್ ವಿಜ್ಞಾನ ಪ್ರಯೋಗಾಲಯವನ್ನು ಅಭಿವೃದ್ಧಿಪಡಿಸಿದೆ.

ಪ್ರಮುಖ ಶಿಫಾರಸ್ಸುಗಳು

ಗುಣಮಟ್ಟದ ಶಿಕ್ಷಕರು ಮತ್ತು ಬೋಧನೆಯ ಮೂಲಕ ಗುಣಮಟ್ಟದ ಶಿಕ್ಷಣವನ್ನು ಒದಗಿಸುವುದಕ್ಕಾಗಿ ಶಿಕ್ಷಣ ಹಕ್ಕು ಕಾಯಿದೆ 2009ರ ಸಾಂವಿಧಾನಿಕ ಆದೇಶವನ್ನು ಈಡೇರಿಸುವುದಕ್ಕಾಗಿ ಸಿ.ಎಸ್.ಎಸ್.ಟಿ.ಇ ಅನ್ನು ಮುಂದುವರಿಸುವುದು ಅತ್ಯಗತ್ಯ. ಈ ಯೋಜನೆಯಿಂದ ಸಾಕಷ್ಟು ಲಾಭ ಪಡೆಯುವುದಕ್ಕಾಗಿ ರಾಜ್ಯಗಳು ಶಿಕ್ಷಕ ಶಿಕ್ಷಣ ವಲಯಕ್ಕಾಗಿ ಸರಿಯಾದ ದೂರದೃಷ್ಟಿ ಮತ್ತು ಯೋಜನೆಯನ್ನು ರೂಪಿಸಬೇಕಾಗಿದೆ. ಚಟುವಟಿಕೆಗಳನ್ನು ಸಕಾಲದಲ್ಲಿ ಮತ್ತು ತಾರ್ಕಿಕ ವಿಧಾನದಲ್ಲಿ ನಡೆಸುವಂತಾಗಲು ಶಾಲಾವಧಿ ಶುರುವಾಗುವ ಸಂದರ್ಭದಲ್ಲಿಯೇ ಅನುದಾನವು ಸಂಸ್ಥೆಗಳಿಗೆ ತಲುಪಬೇಕು ಮತ್ತು ಸಕಾಲದಲ್ಲಿ ಬಿಡುಗಡೆ ಮಾಡಬೇಕು. ಮಾನದಂಡಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ನಮ್ಯತೆಯ ಅಗತ್ಯವಿದೆ.

ಖಾಲಿ ಇರುವ ಆಡಳಿತಾತ್ಮಕ ಮತ್ತು ಶೈಕ್ಷಣಿಕ ಸಿಬ್ಬಂದಿಗಳ ಹುದ್ದೆಯನ್ನು ಸಕಾಲದಲ್ಲಿ ಭರ್ತಿ ಮಾಡಬೇಕು. ಅಲ್ಲದೆ ಶೈಕ್ಷಣಿಕ ಕೇಡರ್ ಒಂದನ್ನು ಸೃಷ್ಟಿಸಿದರೆ, ಗುಣಮಟ್ಟದ ಜೊತೆಗೆ ಗಣನೀಯವಾಗಿ ಕೊಡುಗೆ ನೀಡುವ ಅವರ ಸಾಮರ್ಥ್ಯದಲ್ಲಿ ವೃದ್ಧಿಯಾಗಲಿದೆ. ಅಂತಹ ಶೈಕ್ಷಣಿಕ ಕೇಡರ್ ಗಳಿಗೆ ವೃತ್ತಿ ಮಾರ್ಗಗಳನ್ನು ಅಭಿವೃದ್ಧಿಪಡಿಸುವುದರಿಂದ ಇದಕ್ಕೆ ಸಾಕಷ್ಟು ಲಾಭ ಉಂಟಾಗಲಿದೆ ಹಾಗೂ ಇಂತಹ ಸಂಸ್ಥೆಗಳಿಗೆ ನಿಯೋಜನೆ ಮತ್ತು ಹೊಸ ನೇಮಕಾತಿಯನ್ನು ಮಾಡಲು ಅವಕಾಶ ದೊರೆಯಲಿದೆ. ಕೋರ್ಸ್, ಫೆಲೋಶಿಪ್, ನಿಯೋಜನೆ, ಸಹಯೋಗಿ ಬೋಧನೆ ಮತ್ತು ಸಂಶೋಧನೆ, ಹಾಗೂ ಕೆಲಸದಲ್ಲಿ ಈ ಜ್ಞಾನವನ್ನು ಬಳಸಲು ಅವಕಾಶ ಮಾಡಿಕೊಡುವ ಮೂಲಕ ಬೋಧನಾ ಸಿಬ್ಬಂದಿ ಅಭಿವೃದ್ಧಿ ಅವಕಾಶಗಳನ್ನು ಒದಗಿಸಿಕೊಡುವುದು ಅಗತ್ಯ. ರಾಜ್ಯಗಳ ನಿರಂತರ ನೆರವು ಮತ್ತು ಸಾಮರ್ಥ್ಯ ವೃದ್ಧಿಗಾಗಿ ಪ್ರಮುಖ ಅಧಿಕಾರಿಗಳ ತರಬೇತಿ ಮತ್ತು ವಿಷಯಗಳ ಪರಿಚಯ ಹಾಗೂ ಟಿ.ಎಸ್.ಜಿ ಗಳ ಬಲವರ್ಧನೆಯು ಅಗತ್ಯ.